AKSHARASURYA
ISSN: 2583-620X
Peer-Reviewed, Multi Lingual E-Journal
Volume – 02, Issue – 02, February 2023.

# ಕನ್ನಡ ನಾಡು–ನುಡಿ ಮತ್ತು ಸಂಸ್ಕೃತಿ ಕಟ್ಟುವಲ್ಲಿ ಅಂಕಣ ಸಾಹಿತ್ಯ

**ಬೋವಿ ಹೊನ್ನಪ್ಪ**
ಸಹಾಯಕ ಪ್ರಾಧ್ಯಾಪಕರು
ಎಸ್.ಕೆ.ಎ.ಸಿ.ಕಾಲೇಜು ಹಾನಗಲ್ಲ

ಕನ್ನಡ ನಾಡು–ನುಡಿ, ಸಂಸ್ಕೃತಿ, ಜನ ಜೀವನ, ರಾಜಕಾರಣ, ಸಾಮಾಜಿಕ ತಲ್ಲಣ ಇವುಗಳನ್ನು ವರ್ತಮಾನದಲ್ಲಿ ನಾವು ಹೇಗೆ ನೋಡಬೇಕು, ಯೋಚಿಸಬೇಕು ಹಾಗೂ ಭವಿಷ್ಯವನ್ನು ಹೇಗೆ ರೂಪಿಸಿಕೊಳ್ಳಬೇಕು ಎಂಬುವದನ್ನು ನಾಡಿನ ಅಂಕಣಗಳು ನಿಯತಕಾಲಿಕೆಗಳಲ್ಲಿ ಬಿತ್ತರಿಸುತ್ತಿವೆ. ನಾಡಿನ ಮತ್ತು ಭಾಷೆಯ ಹಾಗೂ ಸಂಸ್ಕೃತಿಯ ಆಂತರಿಕ ಸಂಘರ್ಷವನ್ನು ನಾಡಿನ ಜನತೆ ಹೇಗೆ ಬಗೆಹರಿಸಿಕೊಳ್ಳಬೇಕು, ನಾಡಿನ ಏಕತೆಗೆ ನಾವು ಹೇಗೆ ಸನ್ನದ್ಧರಾಗಬೇಕೆಂದು ಅಂಕಣಕಾರರು ತಮ್ಮ ಅಂಕಣಗಳಲ್ಲಿ ವಿಶ್ಲೇಷಣೆ ಗೊಳಿಸುತ್ತಾರೆ. ನಾಡಿನ ಭಾಷೆ, ಸಂಸ್ಕೃತಿ, ಸಮಾಜಮುಖಿ, ಜನಪರ ಕಾಳಜಿಯ ಮತ್ತು ಓದುಗರ ಅರಿವಿನ ಕ್ಷಿತಿಜವನ್ನು ಅಂಕಣ ಬರಹಗಳು ಹಾಗೂ ಅಂಕಣಕಾರರು ವಿಸ್ತರಿಸುತ್ತಾ ಸಾಗುವುದರಿಂದ ಸಹೃದಯನ ವಿಚಾರಗಳನ್ನು ಉನ್ನತಿಕರಿಸುತ್ತವೆ. ಅಂಕಣ ಬರಹಗಳು ವಾರದ ಆರು ದಿನಗಳ ಕಾಲ ವಸ್ತು ವೈವಿಧ್ಯದಿಂದ ಮಹೋನ್ನತ ಸ್ಥಾನ ಪಡೆದಿರುತ್ತವೆ. ಅವುಗಳಲ್ಲಿ ನಾಡು–ನುಡಿ, ಸಂಸ್ಕೃತಿ, ಪರಿಸರ ಕಾಳಜಿ, ಮಹಿಳಾಪರ ಧ್ವನಿ, ಕ್ರೀಡೆ, ಸಿನಿಮಾ, ಕಲೆ–ಶಿಲ್ಪಕಲೆ, ಆರ್ಥಿಕ, ಭೂಗೋಳ, ಸಾಹಿತ್ಯ ಹೀಗೆ ನಾನಾ ವಿಧದ ವಿಷಯ ವಸ್ತುವನ್ನು ಪಡೆದಿರುವುದು, ಅಂಕಣ ಸಾಹಿತ್ಯದ ಪ್ರಯೋಜನವನ್ನು ಇಮ್ಮಡಿಗೊಳಿಸಿವೆ.

ಇವು ನಾಡು–ನುಡಿ, ಜಾತಿ, ಮತ, ಧರ್ಮಗಳ ಹೆಸರಿನಲ್ಲಿ ಅಸಹನೆ ತುಂಬಿ ತುಳುಕುತ್ತಿರುವ ಇಂದಿನ ಕನ್ನಡ ನಾಡಿನಲ್ಲಿ ಅಂತಹ ಭಾವುಕ ವಿಷಯಗಳ ಬಗ್ಗೆ ಅಂಕಣಕಾರರು ಸಮತೋಲನದಿಂದ ವಿಷಯ ವಸ್ತುವನ್ನು ವಿಶ್ಲೇಷಣೆಗೆ ಒಳಪಡಿಸಿ ಪ್ರಕಟಿಸಿದಾಗ ಅಂಕಣಗಳು ಆರೋಗ್ಯಪೂರ್ಣ ದೃಷ್ಟಿಕೋನವನ್ನು ಒದಗಿಸುತ್ತವೆ. ಇದರ ನಿಲುವುಗಳನ್ನು ಕಂಡಾಗ ಅಪೂರ್ವ ನಿಧಿಯನ್ನು ಆಕಸ್ಮಾತಾಗಿ ಕಂಡಂತಹ ರಸಾನಂದವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಕನ್ನಡ ಭಾಷೆಯ ಯಾವುದೇ ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆ, ಇತರೆ ನಿಯತಕಾಲಿಕೆಯನ್ನು ಅವಲೋಕಿಸಿದಾಗ ಒಂದಲ್ಲಾ ಒಂದು ಅಂಕಣವು ನಾಡು–ನುಡಿ, ಸಂಸ್ಕೃತಿ, ಭಾಷಾಭಿಮಾನ, ಸಾಹಿತ್ಯವನ್ನು ಕುರಿತು ಇದ್ದೇ ಇರುವುದನ್ನು ಅಧ್ಯಯನದ ಹಿನ್ನೆಲೆಯಲ್ಲಿ ಕಂಡುಕೊಳ್ಳಲಾಗಿದೆ. ಇಂದು ಅಂಕಣಕಾರರು ತಮ್ಮ ಬರಹಗಳಲ್ಲಿ ನಾಡು–ನುಡಿ ಪ್ರೇಮ ಮತ್ತು ಸಂಸ್ಕೃತಿಯ ಜನಪ್ರೀಯತೆಯನ್ನು ತೋರುತ್ತಿರುವುದು ಕಂಡುಬರುತ್ತದೆ. ಓದುಗರು ಇಷ್ಟೊಂದಾಗಿ ಅಂಕಣಗಳನ್ನು ಆಸಕ್ತಿಯಿಂದ ವಾಚಿಸದಿದ್ದರೆ, ಇಷ್ಟು ವ್ಯಾಪಕವಾಗಿ ಅವು ಪ್ರಕಟಗೊಳ್ಳುತ್ತಿರಲಿಲ್ಲಾ. ಇಂದು ಕನ್ನಡ ನಾಡಿನಲ್ಲಿ ಅಂಕಣಗಳು ಯಾವುದೇನಿಂ ಯತಕಾಲಿಕೆಯ ಅವಿಭಾಜ್ಯ ಅಂಗವಾಗಿ ಬೇರು ಬಿಟ್ಟಿರುವುದು ಕಂಡುಬರುತ್ತದೆ. ಕನ್ನಡ ನಾಡು–ನುಡಿ, ಸಂಸ್ಕೃತಿ ಕಟ್ಟುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ಕನ್ನಡ ಸಾಹಿತ್ಯದಲ್ಲಿ ಅಂಕಣ ಸಾಹಿತ್ಯಕ್ಕೆ ಸುಧೀರ್ಘ ಇತಿಹಾಸವಿದ್ದರೂ ಕೂಡಾ ಮೊಟ್ಟ ಮೊದಲ ಅಂಕಣ ಯಾವುದು ಎಂಬುದರ ಕುರಿತು ವಿದ್ವಾಂಸರಲ್ಲಿ ಸ್ಪಷ್ಟತೆ ಇಲ್ಲ. 'ಸದ್ಯಕ್ಕೆ ಶೋಧನೆಯ ಮಟ್ಟಿಗೆ **ಜುಲೈ 1, 1843** ರಂದು ಉದಯಿಸಿದ ಕನ್ನಡದ ಪ್ರಥಮ ಪತ್ರಿಕೆ 'ಮಂಗಳೂರು ಸಮಾಚಾರ'ದಲ್ಲಿ ಅದರ ಸಂಪಾದಕ ಹರ್ಮನ್ ಮೊಗ್ಲಿಂಗ್ 'ನೈತಿಕ ವಿಚಾರ'ಗಳು ಎಂಬ ಅಂಕಣವನ್ನು ಬರೆಯಲಾರಂಭಿಸಿದರು.'1 ಅದೇ ಅಂಕಣವು ಕನ್ನಡದ ಮೊಟ್ಟ ಮೊದಲ ಅಂಕಣವಾಗಿದೆ ಎಂದು ವಿದ್ವಾಂಸರ ಅಂಬೋಣವಾಗಿದೆ. ಸಂಶೋಧನೆಯ ಆಧಾರದಿಂದ ಹೇಳುವುದಾದರೆ ಇದೇ ಅಂಕಣ ಮೊದಲ ಅಂಕಣವಾಗಿರಲಾರದು ಇದಕ್ಕಿಂತ ಮುಂಚೆ ಇಂತಹ ಅನೇಕ ಬರಹಗಳು ಜಾಹೀರಾತು ರೂಪದಲ್ಲಿ ಪತ್ರಿಕೆಗಳಲ್ಲಿ ಬಂದಿರಬೇಕು ಅದಕ್ಕೆ ಪ್ರತ್ಯೇಕ ನಾಮವಿಲ್ಲದ ಕಾರಣದಿಂದಾಗಿ ಇದೇ ಮೊದಲ ಅಂಕಣವೆಂದು ನಿಶ್ಚಿತವಾಗಿ ಹೇಳಲು ಆಗುವುದಿಲ್ಲ. ಆದ್ದರಿಂದ 'ಮಂಗಳೂರು ಸಮಾಚಾರ'ದಲ್ಲಿ **'ನೈತಿಕ ವಿಚಾರ'**ಗಳು ಎಂಬ ಸಾಹಿತ್ಯಿಕ ಗದ್ಯ ಬರಹವೇ ಮೊದಲ ಕನ್ನಡ ಅಂಕಣ ಸಾಹಿತ್ಯ ಬರಹವಾಗಿದೆ ಎಂದು ಈ ವರೆಗಿನ ಆಧಾರಗಳಿಂದ ನಿರ್ಧರಿಸಬಹುದು. ಹೀಗಾಗಿ ಕನ್ನಡ ಪತ್ರಿಕೋದ್ಯಮ ಜನ್ಮ ತಾಳಿದಂದಿನಿಂದಲೇ ಅಂಕಣ ಸಾಹಿತ್ಯವೂ ಹುಟ್ಟು ಪಡೆಯಿತು ಎನ್ನಬಹುದು.

ಸಂಸ್ಕೃತಿ ಎಂದರೆ ಏನು? ಎಂಬುದರ ಲಕ್ಷಣವನ್ನು ವಿವರಿಸಬಹುದಾದರೂ ಅಷ್ಟರಿಂದಲೇ ಅದರ ಸ್ವರೂಪವನ್ನು ಪೂರ್ಣವಾಗಿ ತಿಳಿಸಿದಂತೆ ಆಗುವುದಿಲ್ಲಾ. ಹೂವಿನ ಬಣ್ಣ, ಗಾತ್ರ, ವಾಸನೆ, ಆಕಾರ ಇವುಗಳು ಮಾತ್ರದಿಂದಲೇ ಹೂವನ್ನು ಪೂರ್ತಿ ವರ್ಣಿಸುವುದಕ್ಕಾಗುವುದಿಲ್ಲ. ಆದರೆ ಕೆಲವು ಒಪ್ಪಿಗೆಯಾಗಿರುವ ಸಾಮಾನ್ಯ ನಿಯಮಗಳಿವೆ. ಅವುಗಳು ಚಿರಕಾಲದ ಅನುಭವದಿಂದಲೂ, ನಿತ್ಯ ನಿತ್ಯವೂ ಬದಲಾವಣೆ ಹೊಂದುತ್ತಿರುವ ಪ್ರಯೋಗಗಳ ನವೀನತೆಯಿಂದಲೂ ಸ್ಥಾಪಿತವಾದವು.

ಕನ್ನಡ ನಾಡು, ನುಡಿ, ಸಂಸ್ಕೃತಿಯ ಅರಿವಿನ ಹಂದರವನ್ನು ವಿಸ್ತರಿಸುವಲ್ಲಿ ಅಂಕಣಗಳ ಪಾತ್ರವು ಬಹುಮುಖ್ಯವಾದದು. ಇತ್ತೀಚಿನ ದಿನಗಳಲ್ಲಿ ಕನ್ನಡ ಭಾಷೆಯ ದಿನಪತ್ರಿಕೆ, ಸಾಪ್ತಾಹಿಕ, ಮಾಸಿಕ, ತ್ರೈಮಾಸಿಕ ಮೊದಲಾದ ಪತ್ರಿಕೆಗಳನ್ನು ನೋಡಿದರೆ ಅದರಲ್ಲಿ ಹಲವು ಅಂಕಣಗಳು ಕನ್ನಡ ಭಾಷೆ, ನಾಡು, ಸಂಸ್ಕೃತಿಯ ವಿಷಯ ವಸ್ತುವನ್ನು ಹೊಂದಿರುವುದು ಸಂಶೋಧನೆಯ ಹಿನ್ನಲೆಯಲ್ಲಿ ಅವಲೋಕಿಸಲಾಗಿದೆ. ಕನ್ನಡ ಭಾಷೆ, ನಾಡು, ಸಂಸ್ಕೃತಿಯ ವಿಷಯಕ್ಕೆ ಸಂಬಂಧಿಸಿದಂತೆ ಅನೇಕ ಪ್ರಸಿದ್ಧ ಲೇಖಕರು ತಮ್ಮ ಅಂಕಣವನ್ನು ಬರೆದು, ಕನ್ನಡದ ನಾಡು ನುಡಿಯ ವ್ಯಾಪ್ತಿಯನ್ನು ಉನ್ನತಿಕರಿಸಿದ್ದಾರೆ. ಇದು ಅಂಕಣ ಸಾಹಿತ್ಯದ ಜನಪ್ರಿಯತೆಯನ್ನು ಮತ್ತು ಮಹತ್ವದವನ್ನು ಜೊತೆ ಜೊತೆಗೆ ನಾಡಿನ ಪ್ರೇಮ, ಸಂಸ್ಕೃತಿಯ ಏಳ್ಗೆಯನ್ನು ಪಸರಿಸುತ್ತದೆ. ನಾಡಿನ ಓದುಗರ ಮೆಚ್ಚುಗೆಯನ್ನು ಪಡೆಯುವಂತ ಸುಸಂಸ್ಕೃತ ವಿಷಯವಸ್ತುವನ್ನು ಅಂಕಣಗಳು ಒಳಗೊಂಡಿರುವುದರಿಂದಲೇ ಆ ಪ್ರಕಾರದ ಸಾಹಿತ್ಯಕ್ಕೆ ಬೆಲೆ ಮತ್ತು ಬೇಡಿಕೆ ಅಧಿಕವಾಗಿದೆ. ಇಂದಿನ ಯಾವುದೇ ಕನ್ನಡ ದಿನ ಪ್ರತಿಕೆಯನ್ನು ನೋಡಿದರೂ ಅದರಲ್ಲಿ ಒಂದಾದರೂ ಕನ್ನಡ ಭಾಷೆ, ನಾಡು–ನುಡಿ, ಸಂಸ್ಕೃತಿಯ ಚಿತ್ರಣವಿರುವ ಅಂಕಣಗಳು ಇರಲೇಬೇಕು ಎನ್ನುವಷ್ಟರಮಟ್ಟಿಗೆ ಜನಪ್ರಿಯತೆ ಗಳಿಸಿದೆ. ಅಲ್ಲದೇ ಯಾವುದೇ ಪತ್ರಿಕೆಯ ಅವಿಭಾಜ್ಯ ಅಂಗವಾಗಿ ಇಂದು ಅಂಕಣಗಳು ಬೆಳೆದು ನಿಂತಿರುವ ಅಂಶವನ್ನು ಕಂಡುಕೊಳ್ಳಲಾಯಿತು.ಪತ್ರಿಕೋದ್ಯಮದ ಬೆಳವಣಿಗೆಯೇ ಕನ್ನಡ ನಾಡಿನಲ್ಲಿ ಅಂಕಣ ಬರಹದ ಆಯಾಮವನ್ನು ಹಿಗ್ಗಿಸಲು ನೇರವಾದ ಪ್ರಭಾವ ಮತ್ತು ಪ್ರೇರಣೆಯಾಗಿದೆ ಎಂದು ಹಲವು ವಿದ್ವಾಂಸರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಸೃಜನಾತ್ಮಕ ಸಾಹಿತ್ಯದಲ್ಲಿ

ಅಂಕಣಕಾರನು ನಾಡಿನ ಸಂಸ್ಕೃತಿಯನ್ನು ಕಟ್ಟುವಲ್ಲಿ ಸಣ್ಣ ಪುಟ್ಟ ಬದಲಾವಣೆಯ ಸಿದ್ಧ ಮಾದರಿಗಳನ್ನು ಅನುಸರಿಸಬೇಕಾದ ಅಮಿತವಾದ ಅವಕಾಶದ ಸಂದರ್ಭಗಳು ಸೃಜಿಸಿರಬಹುದು. ಇಂತಹ ಸಂದರ್ಭಗಳು ಪತ್ರಿಕಾ ಬರವಣಿಗೆಯಲ್ಲಿ ಬರಹಗಾರನಿಗೆ ಹೆಚ್ಚಿನ ಮುಕ್ತವಾದ ಸ್ವಾತಂತ್ರ್ಯ ಮತ್ತು ಪ್ರಯೋಗಶೀಲತೆಯ ಅವಕಾಶಗಳನ್ನು ನೀಡಿದ್ದೆ, ನಾಡಿನ ಭಾಷೆ, ಸಂಸ್ಕೃತಿಯು ಬಹುಬೇಗನೆ ಜನಮನ ತಲುಪಲು ಪ್ರೇರಣೆಯಾಯಿತು. ಈ ರೀತಿಯಾಗಿ ಪ್ರಯೋಗಶೀಲತೆಯ ಅವಕಾಶಗಳೊಂದಿಗೆ ವಿಚಾರವಂತಿಕೆಯ ಸ್ವಾತಂತ್ರ್ಯ ಬೆರೆತುಕೊಂಡಿತು. ಇದು ಪತ್ರಿಕೆಯಲ್ಲಿ ಒಂದು ಹೊಸತನದ ಅಲೆ ಬೀಸಿ ಕನ್ನಡ ನಾಡು–ನುಡಿ ಮತ್ತು ಸಂಸ್ಕೃತಿ ಕಟ್ಟುವಲ್ಲಿ ಅಂಕಣಗಳು ಮತ್ತು ಅಂಕಣಕಾರರು ಪ್ರಮುಖ ಪಾತ್ರವಹಿಸಿದ್ದಾರೆ.

ಪ್ರಸ್ತುತ ದಿನಮಾನಗಳಲ್ಲಿ ನಿಯತಕಾಲಿಕೆಯ ಒಡಲನ್ನು ಆವರಿಸಿ ಪ್ರಕಟವಾಗುವ ಅಂಕಣಗಳು ಶೀಘ್ರವಾಗಿ ಸಹೃದಯರನ್ನು ತಲುಪಿಸುವ ಸಾಧನಗಳಾಗಿವೆ. ಕನ್ನಡ ನಾಡು–ನುಡಿ, ಸಂಸ್ಕೃತಿ ಕಟ್ಟುವಲ್ಲಿ ಕೆಲವು ಅಂಕಣಗಳನ್ನು ಅವಲೋಕಿಸಿದಾಗ ಪ್ರಮುಖವಾಗಿ ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ 'ಪ್ರತಾಪ ಸಿಂಹ' ಅವರ **'ಬೆತ್ತಲೆ ಜಗತ್ತು'** ಶೀರ್ಷಿಕೆಯ ಅಂಕಣಗಳನ್ನು ಗಮನಿಸಿದಾಗ **'ಕನ್ನಡ ಚಿತ್ರಪ್ರೇಮಿ ಯಾವತ್ತು ಮದ್ರಾಸಿನ ಮರ್ಜಿಗೆ ಬೀಳಲಿಲ್ಲ'** ಎಂಬ ಅಂಕಣದಲ್ಲಿ ನಟಸಾರ್ವಭೌಮ ಡಾ.ರಾಜಕುಮಾರರವರ ನಾಡು ನುಡಿ ಪ್ರೇಮವನ್ನು ಕುರಿತು ವಿಶ್ಲೇಷಿರುವುದು ಸಂಶೋಧನೆ ಹಿನ್ನಲೆಯಲ್ಲಿ ಕಂಡುಬರುತ್ತದೆ. ಅವರದೇ ಮತ್ತೊಂದು ಅಂಕಣ 'ನಾಡು ನುಡಿ ಸಂಸ್ಕೃತಿಗೆ ಟಿಪ್ಪುವಿನ ಕೊಡುಗೆ' ಎಂಬ ಅಂಕಣದಲ್ಲಿ "ನಾಡು ನುಡಿ ಸಂಸ್ಕೃತಿಗೆ ದ್ರೋಹ ಮಾಡಿದ ಟಿಪ್ಪು ಜಯಂತಿಯನ್ನು ಸರ್ಕಾರವು ಕನ್ನಡ ಸಂಸ್ಕೃತಿ ಇಲಾಖೆಯಿಂದ ಆಚರಿಸುತ್ತಿರುವುದು, ಒಂದು ರೀತಿ ಅರಣ್ಯ ಇಲಾಖೆಯವರು ಕಾಡುಗಳ್ಳ ವೀರಪ್ಪನ್ ಜಯಂತಿ ಆಚರಿಸಿದಂತೆ" ಎಂಬ ವಿಷಯವನ್ನು ತಿಳಿಸಿದ್ದಾರೆ. ಆದರೆ ಅದರ ಸತ್ಯಾಸತ್ಯತೆಯನ್ನು ಅರಿಯಲು ಮುಂದಿನ ದಿನಗಳಲ್ಲಿ ಸಂಶೋಧನೆ ಕೈಗೊಂಡಾಗ ಕಂಡುಕೊಳ್ಳಬಹುದು. ವಿಜಯಕರ್ನಾಟಕ ದಿನಪತ್ರಿಕೆಯಲ್ಲಿ **'ಗೊರಳ್ಳಿ ಜಗದೀಶ'**ರವರು ಪ್ರಕಟಿಸಿರುವ **'ನಾಡು ನುಡಿ ಸಂಸ್ಕೃತಿಯ** ರಕ್ಷಣೆ ನಮ್ಮ ಗುರಿ ಆಗಲಿ' ಎಂಬ ಅಂಕಣದಲ್ಲಿ ಕನ್ನಡ ಭಾಷೆಗೆ ಸಾಧು ಸಂತರ, ವಚನಕಾರರ, ದಾಸಶ್ರೇಷ್ಠರ ಕೊಡುಗೆಗಳು ಅಪಾರವಾಗಿವೆ. ಈ ವಿಚಾರವನ್ನು ವಿಮರ್ಶಿಸುತ್ತಾ ಕನ್ನಡ ಭಾಷೆ ನನ್ನ ಭಾಷೆ, ಕನ್ನಡ ನಾಡು ನನ್ನ ನಾಡು ಎಂದಾಗ ಮಾತ್ರ ನಮ್ಮ ನಾಡು ನುಡಿ ಸಂಸ್ಕೃತಿ ಉಳಿಯಲು, ಬೆಳೆಯಲು ಸಾಧ್ಯತೆಯುಂಟು ಎಂದು ತಮ್ಮ ಅಂಬೋಣವನ್ನು ವ್ಯಕ್ತಪಡಿಸಿದ್ದಾರೆ.

ಕನ್ನಡಪ್ರಭ ದಿನಪತ್ರಿಕೆಯಲ್ಲಿ **ಎಸ್. ವಲ್ಲೀಶಕುಮಾರರವರು** **'ನವಿರು ಚಿಂತನ'** ಎಂಬ ಶೀರ್ಷಿಕೆಯಲ್ಲಿ ಪ್ರಕಟಗೊಂಡಿರುವ 'ಮಕ್ಕಳ ವಿಕಸನಕ್ಕೆ ತಾಯ್ನುಡಿ ಶ್ರೇಷ್ಠ' ಎಂಬ ಅಂಕಣದಲ್ಲಿ ಎಳೆಯ ಮಕ್ಕಳ ಕೈ ಹಿಡಿದು ನಡೆಯಲು ಕಲಿಸುವ ಪೋಷಕರು, ತಮ್ಮ ಮಕ್ಕಳ ಕಲಿಕೆಯಲ್ಲಿ ಇದೆ ರೀತಿಯ ತರ್ಕವನ್ನು ಬಳಸುವದಿಲ್ಲವಲ್ಲ. ಮಕ್ಕಳು ನಡೆಯುವುದನ್ನು ಕಲಿಯುವ ಮುನ್ನ ಅವರನ್ನು ಒಂದೆರಡು ತಿಂಗಳು ಕೈ ಹಿಡಿದು ನಡೆಸಬೇಕಾಗುತ್ತದೆ. ನಂತರ ಆ ಮಕ್ಕಳು ಕಾಲುಗಳು ಬಲಿತ ಮೇಲೆ ಓಡುವುದು, ಜಿಗಿಯುವುದು ಕಲಿಯುತ್ತಾರೆ. ಹಾಗೆಯೇ ತಾಯ್ನುಡಿಯ ಮೂಲಕ ಹೆಚ್ಚಿನ ವಿಷಯವನ್ನು ಕಲಿಸುವ ನಿಯಮವನ್ನು ರೂಢಿಸಿಕೊಂಡಲ್ಲಿ ಮಾತ್ರ ನಾಡು ಯಶಸ್ಸು ಸಾಧಿಸಲು ಸಾಧ್ಯವೆಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಇವರೇ ಪ್ರಕಟಿಸಿದ **'ಕನ್ನಡಿಗರು ಬೆಳೆದಾಗ ಮಾತ್ರ ಕನ್ನಡ ಬೆಳೆಯುತ್ತದೆ'** ಎಂಬ ಅಂಕಣವನ್ನು ಕನ್ನಡಪ್ರಭ ದಿನಪತ್ರಿಕೆಯಲ್ಲಿ ಅವಲೋಕಿಸಿದಾಗ' ಈ ಪ್ರಸ್ತುತ ದಿನಮಾನಗಳಲ್ಲಿ ಕನ್ನಡ ಭಾಷೆಯ ಬೆಳವಣಿಗೆ ಜಾಗತಿಕ ಓಟದ ವೇಗಕ್ಕೆ ಸಮನಾಗಿಲ್ಲ. ಹೀಗಿರುವಾಗ ನಮ್ಮ ಭಾಷೆಯನ್ನು ಬೆಳೆಸುವುದು ಹೇಗೆ? ಎನ್ನುವ ಪ್ರಶ್ನೆಗೆ ಪ್ರತಿಯೊಬ್ಬ ಕನ್ನಡಿಗರು ತಮ್ಮ ಮನೋತಲ್ಲಣಗಳಿಗೆ ಉತ್ತರವನ್ನು ಕಂಡು ಕೊಂಡಾಗ ಮಾತ್ರ ಕನ್ನಡಿಗರ ಸರ್ವೋತಮುಖ ಅಭಿವೃದ್ಧಿ ಸಾಧ್ಯವಾಗುತ್ತದೆ ಎನ್ನುತ್ತಾರೆ.

'ವಾರ್ತಾ ಭಾರತಿ' ಪತ್ರಿಕೆಯಲ್ಲಿ ಪ್ರಕಟಗೊಂಡಿರುವ **'ಡಾ. ಎ. ಸತ್ಯನಾರಯಣರವರ' 'ಡಿಜಿಟಲ್ ಕನ್ನಡ ಕಲಿಕೆ ಮತ್ತು ಬಳಕೆ ಕಬ್ಬಿಣದ ಕಡಲೆಯೆ'** ಎಂಬ ಅಂಕಣದಲ್ಲಿ ಪ್ರಸ್ತುತ ವಿಷಯ ವಿಶ್ಲೇಷಿಸುತ್ತಾ ಅಂತರ್ಜಾಲದಲ್ಲಿ ಕನ್ನಡಕ್ಕೆ ಯೂನಿಕೋಡ್ ಕ್ಯೂ ಬೇಕಾಗಿಲ್ಲ? ಎಂಬ ಅಂಶವನ್ನು ವ್ಯಕ್ತಪಡಿಸಿರುವುದು ಕಂಡುಬರುತ್ತದೆ. ಮತ್ತೋರ್ವ ಅಂಕಣಕಾರ 'ಶ್ರೀ ವಾತ್ಸವ ಜೋಷಿ' ಅವರು **'ತಿಳಿರು ತೋರಣ'** ಎಂಬ ಶೀರ್ಷಿಕೆಯಲ್ಲಿ ಪ್ರಕಟಪಡಿಸಿರುವ ಅಂಕಣಗಳಲ್ಲಿ ಕನ್ನಡ ಭಾಷೆ, ಕನ್ನಡ ನಾಡು, ಸಂಸ್ಕೃತಿಯ ಅಂಶಗಳನ್ನು ಕಟ್ಟಿಕೊಟ್ಟಿರುವುದು ಕಂಡುಬರುತ್ತದೆ. ಅಲ್ಲದೆ ಕೇವಲ ನವ್ಹೆಂಬರ್ ತಿಂಗಳಿಗೆ ಮಾತ್ರ ಸೀಮಿತವಾದ ನಾಡು–ನುಡಿ ಪ್ರೇಮ ವರ್ಷವಿಡಿ ಗಾಢನಿದ್ರೆಯಲ್ಲಿ ಮುಳಿಗಿರುವುದು ಏಕೆ? ಮತ್ತು ವರ್ಷವಿಡಿ ನಾವೇಕೆ? ಎಚ್ಚರವಾಗಿದ್ದು ನಾಡು–ನುಡಿ ಪ್ರೇಮವನ್ನು ಬೆಳೆಸಬಾರದು, ಅಂದಾಗ ಮಾತ್ರ ನಮ್ಮ ನಾಡಿನ ಉನ್ನತಿ ಸಾಧ್ಯವಾಗುತ್ತದೆ ಎಂದಿದ್ದಾರೆ.

ಕನ್ನಡ ನಾಡು–ನುಡಿ **ಮತ್ತು ಸಂಸ್ಕೃತಿ** ಕಟ್ಟುವಲ್ಲಿ **ಪ್ರಮುಖ ಪಾತ್ರವಸಿದ** ಅಂಕಣಕಾರರ ಅಂಕಣಗಳೆಂದರೆ " 1850 ಆಸುಪಾಸಿನಲ್ಲಿಯ ಮಂಗಳೂರಿನ 'ಕಂಠೀರವ' ಪತ್ರಿಕೆಯಲ್ಲಿ 'ಹುರಳೀ ಭೀಮರಾಯರು' ಬರೆಯುತ್ತಿದ್ದ ಅಂಕಣವು ತುಂಬಾ ಪ್ರಾಚೀನವಾದುದು. 'ರಾಷ್ಟ್ರಬಂಧು' ಪತ್ರಿಕೆಯಲ್ಲಿ 'ಕಡೆಂಗೋಡ್ಲು ಶಂಕರ ಭಟ್ಟರು' 'ಅಲ್ಲಲ್ಲಿ ಇಷ್ಟಿಷ್ಟು' ಎಂಬ ಅಂಕಣವನ್ನು ಬರೆಯುತ್ತಿದ್ದರು. ಅದೇ 'ರಾಷ್ಟ್ರಬಂಧು' ಪತ್ರಿಕೆಯಲ್ಲಿ 'ಸುನಾತನಿ' ಎಂಬ ಕಾವ್ಯನಾಮದಿಂದ 'ವಾಸುದೇವ ಉಪಾಧ್ಯಾಯ' ಅವರು 'ಹಾಸ್ಯ ಚಟಾಕಿ' ಅಂಕಣ ಬರೆಯುತ್ತಿದ್ದರು. ನಂತರ 'ಜಯಂತಿ' ಪತ್ರಿಕೆಯಲ್ಲಿ ಶ್ರೀರಂಗರು 'ಮಂಗನ ಮಲ್ಲಿನಾಥ' ಎಂಬ ರಾಜಕೀಯ ವಿಷಯಾಧಾರಿತ ಅಂಕಣ ಬರೆಯುತ್ತಿದ್ದರು. ಇದರಿಂದ ಶ್ರೀರಂಗರು ಅಂಕಣ ಬರಹಕ್ಕೆ ವ್ಯಂಗ್ಯ, ಟೀಕೆ, ಟಿಪ್ಪಣಿಗಳ ಮೂಲಕ ಹೊಸ ಆಯಾಮ ಒದಗಿಸಿದರು. ಆನಂತರದ ದಿನಗಳಲ್ಲಿ ಅಂಕಣ ಸಾಹಿತ್ಯಕ್ಕೆ ಬಹುದೊಡ್ಡ ಹೆಸರು, ಸ್ಥಾನಗೌರವ ತಂದುಕೊಟ್ಟವರು ಸಿದ್ದವನಹಳ್ಳಿ ಕೃಷ್ಣಶರ್ಮರು ಮತ್ತು ನಿರಂಜನರು. ಕೃಷ್ಣಶರ್ಮರು 'ವಾಹಿನಿ' ಎಂಬ ಪತ್ರಿಕೆಯಲ್ಲಿ 'ಮಾತಿನ ಮಂಟಪ' ಅಂಕಣವನ್ನು 1942 ರಿಂದ 1946 ರವರೆಗೆ ಬರೆದರು".2 ಅದರೊಂದಿಗೆ ಅವರು ಎಷ್ಟೊಂದು ಪಾಂಡಿತ್ಯ ಹೊಂದಿದ್ದರೆಂದರೆ ಅದನ್ನು ನಿಲ್ಲಿಸಿದ ನಂತರ ಹಲವಾರು ವರ್ಷ ಬರವಣಿಗೆಯನ್ನೇ ನಿಲಿಸಿಬಿಟ್ಟರು. ಪುನಃ 1960 ರ ದಶಕದಲ್ಲಿ 'ಸಂಯುಕ್ತ ಕರ್ನಾಟಕ', 'ಕರ್ಮವೀರ' ಗಳಲ್ಲಿ 'ಮಾತಿನ ಮಂಟಪ' ಕಟ್ಟಿದರು. ಕೆಲಕಾಲ 'ಪ್ರಜಾವಾಣಿ'ಯಲ್ಲಿ 'ಚಿಂಚನ ಮಂಥನ' ಬರೆದರು. ಈ ಅಂಕಣ ಸಾಹಿತ್ಯದಲ್ಲಿ ಅವರದು ಆದರ್ಶಮಯ ಮಾತುಗಳು, ಅನನುಕರಣೀಯ ಶೈಲಿ, ಚಿಕ್ಕ ಚಿಕ್ಕ ವಾಕ್ಯಗಳು ತುಂಬಾ ಸೊಗಸಾಗಿ ಮೂಡಿಬಂದಿವೆ. 1940 ರಿಂದ 1950 ರ ಸುಮಾರಿಗೆ 'ನಿರಂಜನರು' 'ಪ್ರಜಾವಾಣಿ' ದಿನಪತ್ರಿಕೆಯಲ್ಲಿ 'ಬೇವು–ಬೆಲ್ಲ', 'ಜನಪ್ರಗತಿ' ಪತ್ರಿಕೆಯಲ್ಲಿ 'ಸುದಿನ ಸಂಚಯ' ಎಂಬ ಅಂಕಣಗಳನ್ನು ಬರೆಯುತ್ತಿದ್ದರು. 'ಚಿತ್ರಗುಪ್ತ' ಪತ್ರಿಕೆಯಲ್ಲಿಯಲ್ಲೂ 'ಐದು ನಿಮಿಷ' ಎಂಬ ಒಂದು ಅಂಕಣ ಬರೆಯುತ್ತಿದ್ದರು.

AKSHARASURYA
ISSN: 2583-620X
Peer-Reviewed, Multi Lingual E-Journal
Volume – 02, Issue – 02, February 2023.

“60 ರ ದಶಕದಲ್ಲಿ ನಿರಂಜನರು ‘ಕರ್ಮವೀರ’ ಪತ್ರಿಕೆಯಲ್ಲಿ ‘ನನ್ನ ಅಂಕಣ’ ಎಂದು ಬೆಂಗಳೂರಿಗೆ ಪತ್ರವನ್ನು ಬರೆಯುತ್ತಿದ್ದರು. ‘ಜನಪ್ರಗತಿ’ ಪತ್ರಿಕೆಯಲ್ಲಿ ಅವರದೇ ಮತ್ತೊಂದು ಅಂಕಣ ‘ಕಾಲಕ್ಷೇಪ’ ವನ್ನು ಬರೆಯುತ್ತಿದ್ದರು. ಅವು ಕೇವಲ ಕಾಲಕ್ಕೆ ಕಾಲಕ್ಷೇಪವಾಗಿರದೆ ವಿಚಾರ ಪ್ರಚೋದಕವಾಗಿದ್ದವು. ನಂತರದ ದಿನಮಾನಗಳಲ್ಲಿ ದೊಡ್ಡ ದೊಡ್ಡ ಕನ್ನಡ ಸಾಹಿತಿಗಳ ದಂಡೇ ಅಂಕಣ ಬರಹಕ್ಕೆ ನಿರತರಾಗಿದ್ದು ಗಮನಾರ್ಹ ಸಂಗತಿ ಎಲ್.ಎಸ್.ಶೇಷಗಿರಿರಾಯರು ‘ಪ್ರಜಾಮತ’ದಲ್ಲಿ ‘ಸಹಚಿಂತನ’ ಅಂಕಣವನ್ನು ದೀರ್ಘಕಾಲ ಬರೆದರು. ವಿ.ಎಂ. ಇನಾಮದಾರ ಅವರು ಸುಧಾ ಪತ್ರಿಕೆಯಲ್ಲಿ ‘ಸಾಹಿತ್ಯ ವಿಹಾರ’ ಎಂಬ ಅಂಕಣವನ್ನು ಬಹುಕಾಲ ಬಂದಿತು. ಇವುಗಳೆಲ್ಲವು ಹೆಸರೇ ಸೂಚಿಸುವಂತೆ ಅವು ಸಾಹಿತ್ಯ ಕುರಿತ ಬರಹಗಳಾಗಿದ್ದವು”.3 ಶೇಷಗಿರಿರಾಯರದೂ ಹಾಗೆಯೇ ಸಾಹಿತ್ಯ–ಸಂಸ್ಕೃತಿ ಕುರಿತದ್ದು. ನಂತರದ ದಿನಮಾನಗಳಲ್ಲಿ ‘ಕರ್ಮವೀರ’ದಲ್ಲಿ ಬಸವರಾಜ ಕಟ್ಟೀಮನಿಯವರ ‘ಶಾಸಕ ಸಾಹಿತಿಯ ಸಂಪುಟದಿಂದ’ ಶಿರ್ಷಿಕೆಯಲ್ಲಿ ಅಂಕಣಗಳು ಬಹುಕಾಲ ಪ್ರಕಟಗೊಂಡವು. ಇವುಗಳಲ್ಲಿ ಸಾಹಿತ್ಯಿಕ ವಿಷಯಗಳಿಗಿಂತ ತಮ್ಮ ಅನುಭವಕ್ಕೆ ಹೆಚ್ಚು ಪ್ರಾಧ್ಯಾನ್ಯತೆ ನೀಡಿದ್ದರು. ಅವರ ಅಂಕಣಗಳು ವೈಯಕ್ತಿಕ ರಾಗರೋಷಗಳಿಗೆ ಸಿಂಹಪಾಲು ಪಡೆದುಕೊಂಡಿದ್ದವುಗಳಾಗಿವೆ. ಅವರೆ ‘ಪ್ರಜಾಮತ’ ಪತ್ರಿಕೆಯಲ್ಲಿ ‘ಮಾನಸ ಸರೋವರ’ ಎಂಬ ಅಂಕಣವನ್ನು ಬರೆದಿರುವ ದಾಖಲೆಗಳಿವೆ. ಕು.ಶಿ ಹರಿದಾಸಭಟ್ಟ ಅಂಕಣಕಾರರು ‘ಉದಯವಾಣಿ’ ಪತ್ರಿಕೆಯಲ್ಲಿ 7 ದಿನಗಳಿಗೊಮ್ಮೆ ಆರಂಭದಿಂದಲೂ ‘ಲೋಕಾಭಿರಾಮ’ ಅಂಕಣವನ್ನು ವೃತವೆಂಬಂತೆ ನಿರಂತರವಾಗಿ ಬರೆಯುತ್ತಿದ್ದರು. ಇವರು ಸಾಹಿತ್ಯ, ಶಿಕ್ಷಣ, ಸಮಾಜಿಕ ವಿಷಯಗಳನ್ನೆತ್ತಿಕೊಂಡು ಚಿಂತಿಸುತ್ತಿದ್ದರು. ತ.ರಾಸು. ಅವರು ‘ವಾಹಿನಿ’ ಎಂಬ ಪತ್ರಿಕೆಯಲ್ಲಿ ‘ತೋಚಿದ್ದು ಗೀಚಿದ್ದು’ ಎಂಬ ಅಂಕಣವನ್ನು ಬರೆಯುತ್ತಿದ್ದರು. ಇವರ ಅಂಕಣದ ವಸ್ತುವು ಮನಸ್ಸಿಗೆ ಹೊಳೆದ ಯಾವುದಾದರೂ ಇರಬಹುದೆಂಬುದನ್ನು ಅದರ ಶೀರ್ಷಿಕೆಯು ಸೂಚಿಸುತ್ತದೆ. ಜಿ.ಪಿ.ರಾಜರತ್ನಂ ರವರು ‘ಸುಧಾ’ ಎಂಬ ಪತ್ರಿಕೆಯಲ್ಲಿ ಭ್ರಮರ ಅಂಕಣವನ್ನು ಪ್ರಜಾಮತಿ ಪತ್ರಿಕೆಯಲ್ಲಿ ‘ವಿಚಾರ ಸರಣಿ’ ಅಂಕಣಗಳನ್ನು ಬರೆದಿರುವುದು ಸಂಶೋಧನೆಯ ಹಿನ್ನೆಲೆಯಿಂದ ತಿಳಿದು ಬಂದಿದೆ. ಗಾತ್ರದಲ್ಲಿ ಅಂಕಣಗಳು ಚಿಕ್ಕದಾರೂ ಪಾತ್ರದಲ್ಲಿ ಹಿರಿದಾದ ಅಂಕಣಗಳಿವೆ. ಇವೆಲ್ಲವುಗಳನ್ನು ಸಂಕಲನಗೊಳಿಸಿ ಗ್ರಂಥರೂಪದಲ್ಲಿ ಅವರು ಪ್ರಕಟಗೊಳಿಸಿದ್ದಾರೆ. ಕೆ.ಟಿ. ಪಾಂಡುರಂಗಿಯವರು ‘ಸಂಯುಕ್ತ ಕರ್ನಾಟಕ’ ಎಂಬ ದಿನ ಪತ್ರಿಕೆಯಲ್ಲಿ ‘ವಿಚಾರ ಜ್ಯೋತಿ’ ಮತ್ತು ‘ಕಸ್ತೂರಿ ಪತ್ರಿಕೆ’ ಯಲ್ಲಿ ‘ಜೀವನ ದರ್ಶನ’ ಎಂಬ ಎರಡೆರಡು ಅಂಕಣಗಳನ್ನು ಬರೆದಿರುವ ದಾಖಲೆಗಳು ಇವರ ನಾಮಕ್ಕೆ ಅಂಟಿಕೊಂಡಿವೆ.

‘ಬೀಚಿ’ ಅವರು ಹಾಸ್ಯ ಅಂಕಣದಲ್ಲಿ ಬಹುದೊಡ್ಡ ಹೆಸರು ಮಾಡಿರುವುದನ್ನೆ ನಮ್ಮ ಸಂಶೋಧನೆಯ ಆಧಾರದಿಂದ ತಿಳಿದುಕೊಳ್ಳಲಾಯಿತು. ಆ ದಿನಮಾನಗಳಲ್ಲಿ ಹಾಸ್ಯ ಬರಹಗಳಿಗೆ ಬಹುದೊಡ್ಡ ಬೇಡಿಕೆ ಇತ್ತು. ಅವರು ಸಂಯುಕ್ತ ಕರ್ನಾಟಕದಲ್ಲಿ ‘ಬೀಚಿದ್ದು ಗೀಚಿದ್ದು’ ಎಂಬ ಹಾಸ್ಯ ಅಂಕಣವನ್ನು ಕೆಲ ಕಾಲ ಬರೆದರು. ‘ಪ್ರಜಾತಮ’ ಪತ್ರಿಕೆಯಲ್ಲಿ ‘ಎನಗೆ ನರೆಯು ಬರುತ್ತಿದೆ’ ಎಂಬ ವಿಡಂಭನಾಧಾ–ರಿತವಾದ ಅಂಕಣವನ್ನು, ‘ಮಯೂರ’ ಪತ್ರಿಕೆಯಲ್ಲಿ ‘ಮರೆಯಲಾಗದ ಮಹಾನುಭಾವ’ ಎಂಬ ಅಂಕಣಗಳನ್ನು ನಿಯತವಾಗಿ ಬರೆದಿರುವುದು ತಿಳಿದುಬರುತ್ತದೆ. ಈ ಅಂಕಣಗಳಲ್ಲಿ ಅವರು ಹಾಸ್ಯದ ಹೊನಲು ಸುರಿಸಿದ್ದಾರೆ ಎಂದು ವಿದ್ವಾಂಸರುಗಳು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಸುಧಾ ಪತ್ರಿಕೆಯಲ್ಲಿ ಕೆಲವು ವರ್ಷಗಳ ಕಾಲ ‘ನೀವು ಕೇಳಿದಿರಿ’ ಎಂಬ ಓದುಗರ ಪ್ರಶ್ನೆಗಳಿಗೆ ಅಂಕಣದಲ್ಲಿ ಉತ್ತರಿಸಿರುವ ಕುರುಹುಗಳು ದೊರಕುತ್ತದೆ. ಅದು ‘ಉತ್ತರ ಭೂಪ’ ಗ್ರಂಥವಾಗಿ ಪ್ರಕಟಗೊಂಡಿದೆ. ರಾವ್ ಬಹುದ್ದೂರ ತಾವೇ ಸಂಪಾದಕರಾಗಿದ್ದ ‘ಕಲ್ಯಾಣಿ ಡೈಜೆಸ್ಟ್’ ನಲ್ಲಿ ದೇಭ(ದೇಶಭಕ್ತ)ನ ಉವಾಚ ಎಂಬ ಹಾಸ್ಯಭರಿತ ಅಂಕಣವನ್ನು ಬರೆಯುತ್ತಿದ್ದರು. ಇದರಲ್ಲಿ ಒಂದು ಅತ್ಯುತ್ತಮವಾದ ದೇಭ ಪತ್ರವನ್ನೇ ಸೃಷ್ಟಿಸಿದರು. ಮತ್ತೊಬ್ಬ ಹಾಸ್ಯ ಅಂಕಣಕಾರರಾದ ಎನ್ಕೆ ಅವರು ‘ಪ್ರಜಾಮತ’ ಪತ್ರಿಕೆಯಲ್ಲಿ ಹಾಗೂ ‘ಕರ್ಮವೀರ’ ದಲ್ಲಿ ‘ಪ್ರಕಾರೇಣ’ ಎಂದು ಅಂಕಣಕ್ಕೆ ಹೆಸರಿಟ್ಟಿದ್ದುದು ಅವರ ಹಾಸ್ಯಪ್ರಿಯತೆಯ ದ್ಯೋತಕವಾಗಿದೆ. ಹಾಸ್ಯ ಸಾಹಿತಿಗಳಾದ ಜಿ. ನಾಯಾಯಣ, ನಾಡಿಗೇರ ಕೃಷ್ಣರಾಯರು, ಡಿ. ಸುನಂದಮ್ಮ, ಬೀಚಿ, ನರಸಿಂಹಮೂರ್ತಿ ಮೊದಲಾದ ಅಂಕಣಕಾರರು ‘ವಿಕಟ ವಿನೋದಿನಿ’, ‘ಉಷಾ’, ‘ಕಥಾಂಜಲಿ’ ಮೊದಲಾದ ಪತ್ರಿಕೆಗಳಲ್ಲಿ ಸುಪ್ರಸಿದ್ದ ಹಾಸ್ಯ ಬರಹಗಾರರಾಗಿದ್ದರು. ಡಾ. ಎಂ. ಶಿವರಾಂ, ರಾ.ಸಿ. ಹೆಸರಿನಿಂದ ಪ್ರಸಿದ್ದಿ ಪಡಿದಿದ್ದು, ಇವರು ಹಾಸ್ಯಕ್ಕೆ ಮೀಸಲಾಗಿದ್ದ ಕೊರವಂಜಿ’ ಪತ್ರಿಕೆಯಲ್ಲಿ ‘ತಿಂಗಳ ತಿಳಿಗಾಳಿ’ ಅಂಕಣ ಬರೆಯುತ್ತ ಓದುಗರನ್ನು ಬಿದ್ದು ಬಿದ್ದು ನಗುವಂತೆ ಮಾಡುತ್ತಿದ್ದರು. ಇನ್ನು ಹವ್ಯಾಸಿ ಅಂಕಣಕಾರರು ವೃತ್ತಿಗಿಂತ ಪತ್ರಕರ್ತರು ಅನೇಕ ಅಂಕಣ ಬರಹಗಳನ್ನು ಬರೆದಿರುವುದು ತಿಳಿದುಬರುತ್ತದೆ.

‘ಪ್ರಜಾಮತ’ದಲ್ಲಿ ಹಾಗೂ ಸಂಯುಕ್ತ ಕರ್ನಾಟಕದಲ್ಲಿ ಕೋ. ಚನ್ನಬಸಪ್ಪ ಮತ್ತು ಎಸ್.ಜಿ. ಮೈಸೂರಮಠ ಮೊದಲಾದವರನ್ನು ಇಲ್ಲಿ ಹೆಸರಿಸಬಹುದು. ಕೆ. ಜನಾರ್ಧನ ಅಂಕಣಕಾರರು ಕೆಲಕಾಲ ಸಂಯುಕ್ತ ಕರ್ನಾಟಕದ ಸಂಪಾದಕರಾಗಿದ್ದು, ಆ ವೃತ್ತಿ ಬಿಟ್ಟ ಮೇಲೆ ‘ತರಂಗ’ದಲ್ಲಿ ‘ವಿಧಾನ ವೀದಿಯಿಂದ’ ಅಂಕಣ ಬರೆದು. ಇವರ ಅಂಕಣದ ವಸ್ತು ಕರ್ನಾಟಕ ರಾಜಕೀಯ ವಿದ್ಯಮಾನಗಳ ವಿಶ್ಲೇಷಣೆಯನ್ನು ಒಳಗೊಂಡಿರುತ್ತಿದ್ದವು. ಎಚ್ಚೆಸ್ಕೆರವರು ‘ಸುಧಾ’ದಲ್ಲಿ ವಾರದ ವ್ಯಕ್ತಿ ಅಂಕಣವನ್ನು ‘ಸಮದರ್ಶಿ’ಯಲ್ಲಿ ಸುದ್ದಿಯ ಹಿನ್ನೆಲೆ, ಪ್ರಜಾವಾಣಿಯಲ್ಲಿ ಪ್ರತಿ ಸೋಮವಾರ ‘ಆರ್ಥಿಕ ಚಿಂತನೆ’ ಎಂಬ ಜನಪ್ರೀಯ ಅಂಕಣಗಳ ಪ್ರಕಟವಾಗುತ್ತಿದ್ದವು. ಐ.ಕೆ. ಜಾಗೀರದಾರರು ‘ಪ್ರಜಾಮತ’ ದಲ್ಲಿ ‘ವಿಚಾರ ಸರಣಿ’ ಎಂಬ ಅಂಕಣ ಕೆಲಕಾಲ ನಡೆದು ನಿಂತಿತು. ಮುಂದೆ ಅವರೇ ‘ಸಂಕೇತ’ ಪತ್ರಿಕೆಯಲ್ಲಿ ‘ಹರೀಕತ್’ ಎಂಬ ಅಂಕಣವನ್ನು ಬರೆದರು. ಪಾಟೀಲ ಪುಟ್ಟಪ್ಪ’ ತಮ್ಮ ಸಂಪಾದಿತ ‘ಪ್ರಪಂಚ’ ಪತ್ರಿಕೆಯಲ್ಲಿ ‘ನನ್ನ ಹೃದಯದಿಂದ ನಿಮ್ಮ ಹೃದಯಕ್ಕೆ’ ಮತ್ತು ಪ್ರಜಾವಾಣಿಯಲ್ಲಿ ‘ನಮ್ಮ ನಾಡು ನಮ್ಮ ನುಡಿ’ ಅಂಕಣ ಬರೆದಿದ್ದಾರೆ. ಇತ್ತೀಚಿನ ವರೆಗೂ ಅವರು ಅಂಕಣವನ್ನು ಬರೆಯವುದನ್ನು ಮುಂದುವರೆಸಿದ್ದಾರೆ. ವ್ಯಕ್ತಿ, ಘಟನೆಗಳ ಒಳನೋಟ ಮೊದಲಾದವು ಇವರ ಅಂಕಣ ಸಾಹಿತ್ಯದ ಪ್ರಮುಖ ವಸ್ತುವಾಗಿದ್ದಿತು. ಈ ಬರಹಗಳು ನಂತರದಲ್ಲಿ ಪುಸ್ತಕ ರೂಪದಲ್ಲಿಯೂ ಪ್ರಕಟಗೊಂಡಿರುತ್ತವೆ. “ಸಿದ್ದಲಿಂಗ ಪಟ್ಟಣಶೆಟ್ಟಿ ಅವರು ‘ಚಹಾದ ಜೋಡಿ ಚೂಡಾದ್ದಾಂಗ’ ಎಂಬ ಅಂಕಣವನ್ನು ‘ಪ್ರಜಾವಾಣಿ’ಯ ಭಾನವಾರದ ಪತ್ರಿಕೆಯಲ್ಲಿ ಬರೆಯುತ್ತಿದ್ದರು. ಇಲ್ಲಿನ ಅಂಕಣಗಳೆಲ್ಲ ಮುಂದೆ ‘ಚಹಾದ ಜೋಡಿ ’ 1996ರಲ್ಲಿ ಎಂಬ ಪುಸ್ತಕದಲ್ಲಿ ಪ್ರಕಟವಾದವು”.4 ಚಂದ್ರಶೇಖರ ಪಾಟೀಲ ಅವರು ‘ಟಿಂಗರ್ ಬುಡ್ಡಣ್ಣ’ ಎಂಬ ಹಾಸ್ಯಭರೀತ ಅಂಕಣವನ್ನು ‘ಸಂಯುಕ್ತ ಕರ್ನಾಟಕ’ ದಿನಪತ್ರಿಕೆಯಲ್ಲಿ ಬರೆಯುತ್ತಿದ್ದರು. ಹೀಗೆಯೇ ಪಿ. ಲಂಕೇಶರವರು ‘ಲಂಕೇಶ ಪತ್ರಿಕೆ’ ಯಲ್ಲಿ ಬರೆಯುತ್ತಿದ್ದ ಸಂಪಾದಕನ ಟಿಪ್ಪಣಿಗಳು ಪುಸ್ತಕ ರೂಪದಲ್ಲಿ ಪ್ರಕಟಗೊಂಡಿದೆ.

ವೈಕುಂಠರಾಜು ತಮ್ಮದೆ ವಾರಪತ್ರಿಕೆಯಲ್ಲಿ ‘ಚುಚ್ಚುಮದ್ದು’ ಎಂಬ ಅಂಕಣವನ್ನು ಚೆನ್ನಾಗಿಯೇ ನಿರ್ವಹಿಸುತ್ತಿದ್ದರು. ಸಂತೋಷ ಕುಮಾರ ಗುಲ್ವಾಡಿ ತರಂಗದಲ್ಲಿ ಬರೆಯುತ್ತಿದ್ದ ‘ಅಂತರಂಗ ಬಹಿರಂಗ’ ಎಂಬ ಸಂಪಾದಕೀಯಗಳು ಅದೆ ಹೆಸರಿನಿಂದ ಗ್ರಂಥ ರೂಪದಲ್ಲಿ ಪ್ರಕಟಗೊಂಡಿದೆ. ಸಾ.ವೆಂ ಆಚಾರ್ಯರು ‘ಲಾಂಗೂಲಾಚಾರ್ಯ’ ಎಂಬ ಕಾವ್ಯನಾಮದೊಂದಿಗೆ ಕರ್ಮವೀರ ಪತ್ರಿಕೆಯಲ್ಲಿ ಸಂಪಾದಕರಾಗಿ

'ಓದುಗರೊಡನೆ ಹರಟೆ' ಅಂಕಣಗಳನ್ನು ಪ್ರಕಟಗೊಳಿಸುತ್ತಿದ್ದರು. ಟಿ.ಎಸ್. ಆರ್ (ಟಿ.ಎಸ್ ರಾಮಚಂದ್ರರಾವ್) ಪ್ರಜಾವಾಣಿ ಪತ್ರಿಕೆಯ ಸಂಪಾದಕರಾಗಿ 'ಛೂಬಾಣ' ಅಂಕಣದೊಂದಿಗೆ ಸಹೃದಯರ ಪಕ್ಕೆಗೆ ಕಚಗುಳಿ ಇಟ್ಟವೆ. ಹೀಗೆ ಪ್ರಮುಖ ಅಂಕಣಕಾರರು ಮತ್ತು ಅವರ ಅಂಕಣಗಳು ಕನ್ನಡ ನಾಡು-ನುಡಿ, ಸಂಸ್ಕೃತಿ, ಸಾಹಿತ್ಯ, ಕಲೆ, ಶಿಲ್ಪಕಲೆಯನ್ನು ಉಳಿಸಿ ಬೆಳಸುವಲ್ಲಿ ಪ್ರಮುಖ ಸಂಪರ್ಕ ಸಾಧನಗಳಾಗಿವೆ. ಹೊಸಗನ್ನಡ ಸಾಹಿತ್ಯ ರೂಪಗಳಲ್ಲಿ ಒಂದಾದ ಅಂಕಣದ ಪರಿಕಲ್ಪನೆಯ ಕಡೆಗೆ ಅಕ್ಷಿಪಟಲ ಹೊರಳಿಸಿದಾಗ ಈ ರೀತಿ ಕಂಡುಕೊಳ್ಳಲಾಯಿತು.

ಅಂಕಣ ಸಾಹಿತ್ಯವು ವಿಶಿಷ್ಟ ಬಗೆಯ ಪತ್ರಿಕಾ ಸಾಹಿತ್ಯವಾಗಿದ್ದು, ಪತ್ರಿಕೆಗಳಲ್ಲಿ ನಿಯಮಿತವಾಗಿ ಬರೆಯುವ ನಿರ್ದಿಷ್ಟ ಲೇಖನಕ್ಕೆ ಅಂಕಣ ಬರಹವೆಂದು ಹೆಸರು. ಕನ್ನಡದಲ್ಲಿ ಅಂಕಣ ಸಾಹಿತ್ಯದ ಪರಿಕಲ್ಪನೆ 'ಆಂಗ್ಲ' ಭಾಷೆಯ ಪತ್ರಿಕೋದ್ಯಮದಿಂದ ಬಂದಿದೆ. ಎಂಬುವುದು ಹಲವು ವಿದ್ವಾಂಸರ ಅಭಿಪ್ರಾಯವಾಗಿದೆ. 'ಅಂಕಣ' ಎಂಬ ಪದವು 'ಆಂಗ್ಲ' ಭಾಷೆಯ 'column' (ಕಾಲಂ) ಎಂಬ ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ 'ಅಂಕಣ' ಎಂಬ ಪದ ಬಳಕೆಗೆ ಬಂದಿದೆ. ಈ ವಿಷಯವನ್ನು ಹಲವು ವಿದ್ವಾಂಸರು ನಿರ್ವಿವಾದವಾಗಿ ಒಪ್ಪಿಕೊಂಡಿದ್ದಾರೆ. 'column' ಎಂದರೆ ಆಂಗ್ಲ ಭಾಷೆಯಲ್ಲಿ "A regular feature or series of articles in a newspaper, magazine, or the like, usually having readily identifiable heading and the byline of the writer or editor, that reports or comment. ಅಂಕಣ ಸಾಹಿತ್ಯದ ಕುರಿತು ಅನೇಕ ಪಾಶ್ಚಿಮಾತ್ಯ ಮತ್ತು ಭಾರತೀಯ ವಿದ್ವಾಂಸರು ಅಂಕಣ ಸಾಹಿತ್ಯದ ಅರ್ಥ ಮತ್ತು ತಮ್ಮದೇ ಆದ ವ್ಯಾಖ್ಯಾನಗಳನ್ನು, ಅಭಿಪ್ರಾಯಗಳನ್ನು ನೀಡಿದ್ದಾರೆ. ಅವುಗಳನ್ನು ಇಲ್ಲಿ ವಿಮರ್ಶೆ ಮತ್ತು ವಿಶ್ಲೇಷಣೆಗೊಳಪಡಿಸಲಾಗಿದೆ.

'ಆಂಗ್ಲ" ಭಾಷೆಯ 'Column' ಎಂಬ ಪದಕ್ಕೆ ಸಂವಾದಿಯಾಗಿ 'ಅಂಕಣ' ಶಬ್ದವನ್ನು ಕನ್ನಡದಲ್ಲಿ ಬಳಕೆ ಮಾಡುತ್ತಾರೆ. ಆಂಗ್ಲ ಭಾಷೆಯ 'ಕಾಲಂ' ಶಬ್ದಕ್ಕೆ ಮೊದಲ ಅರ್ಥ ಕಂಬ= A pillar ಇತರೆ ಅರ್ಥಗಳು ಉಂಟು. ಅಂಕಣಕಾರ ಎಂದರೆ 'ಆಂಗ್ಲ ಭಾಷೆಯ columnist ಎಂದು ಅರ್ಥ. ಪ್ರತಿದಿನ, ಪ್ರತಿವಾರ, ಪ್ರತಿತಿಂಗಳು ನಿಯತಕಾಲಿಕೆಗಳಲ್ಲಿ ಬರುವ ಯಾವುದಾದರು ವಿಶೇಷ ವಿಷಯಾಧಾರಿತ ಲೇಖನಕ್ಕೆ ಅಂಕಣ ಎಂದು ಮತ್ತು ದೇಶ್ಯ ಶಬ್ದವಿರಬೇಕೆಂದು 'ಪ್ರೊ.ಜಿ. ವೆಂಕಟಸುಬ್ಬಯ್ಯ', ಕನ್ನಡ ನಿಘಂಟು ತಜ್ಞರು ಅಭಿಪ್ರಾಯ ಪಡುತ್ತಾರೆ".5

ಅಂಕಣ ಎನ್ನುವುದು ಮನೆ ಅಥವಾ ಕಟ್ಟಡದೊಳಗಿನ ಎರಡು ಕಂಬಗಳ ಇಲ್ಲವೆ ತೊಲೆಗಳ ನಡುವಣ ಸ್ಥಳ (ವಿಸ್ತಾರ)ವೆಂದು ವಾಚ್ಯಾರ್ಥ. ಸಾಮಾನ್ಯವಾಗಿ ಇದನ್ನು ಮನೆ ಅಥವಾ ಕಟ್ಟಡದೊಳಗಿನ ಕೋಣೆ, ಪಡಸಾಲೆ, ಹಕ್ಕೆ (ದನದ ಕೊಟ್ಟಿಗೆ) ಇತ್ಯಾದಿಗಳ ಪ್ರದೇಶದ ವಿಸ್ತಾರವನ್ನು ಹೇಳುವ ಮಾಪನವಾಗಿ ಬಳಸುತ್ತಾರೆ. ಇಂದಿಗೂ ಹಳ್ಳಿಗಳಲ್ಲಿ 3, 6, 8, 12, 16, 20 ಅಂಕಗಳು ಇರುವ ಮನೆಗಳೆಂದು ಅಂಕಣದ ಆಧಾರದ ಮೇಲೆ ಮನೆಗಳ ವಿಸ್ತೀರ್ಣವನ್ನು ಮಾಪನ ಮಾಡುತ್ತಾರೆ. ಸಾಮಾನ್ಯವಾಗಿ ಒಂದು ಅಂಕಣವೆಂದರೆ 5 ಅಡಿ ಅಗಲದ 7 ಅಡಿ ಉದ್ದ ಇರುವ ಎರಡು ತೊಲೆಗಳ ಅಥವಾ ಕಂಬಗಳ ನಡುವಿನ ವಿಸ್ತೀರ್ಣವಾಗಿದೆ. ಜನಪದರ ದೃಷ್ಟಿಯಲ್ಲಿ ಸಂಕುಚಿತ ಅರ್ಥದಲ್ಲಿ ಅಂಕಣವೆನ್ನುವುದು ಮನೆಯ ಅಂಗುಲ ಅಂದರೆ ಉದ್ದ-ಅಗಲದಗಳ ಅಳತೆ ಹೇಳುವ ಚಿಕ್ಕ ಮಾಪನಕ್ಕೆ ಬಳಸುವ ಪದವಾಗಿದೆ. ಇದೇ ಅರ್ಥ ಬರುವಂತೆ ಪತ್ರಿಕೆಗಳಲ್ಲಿ ಬರುವ ಸುದ್ದಿಗಳನ್ನು ಒಂದು ನಿಯಮಿತವಾದ ಶೀರ್ಷಿಕೆಯಲ್ಲಿ ಮತ್ತು ನಿರ್ದಿಷ್ಟವಾದ ವಿಚಾರಗಳನ್ನು ಕುರಿತು, ಸಂಕ್ಷಿಪ್ತ ಮಾಹಿತಿ ತಿಳಿಸುವ, ಸಾಹಿತ್ಯಿಕ ಪತ್ರಿಕಾ ಪ್ರಕಟಣೆಗೆ ಅಂಕಣವೆಂದೂ ಕರೆಯಲಾಗುತ್ತದೆ. ಈ ದೃಷ್ಟಿಯಲ್ಲಿ ಅಂಕಣ ಎನ್ನುವುದು ಸಾಹಿತ್ಯಿಕ, ರಾಜಕೀಯ, ವಿಜ್ಞಾನ, ಶೈಕ್ಷಣಿಕ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಮೊದಲಾದ ವಿಚಾರಧಾರೆಗಳನ್ನು ಅಭಿವ್ಯಕ್ತ ಪಡಿಸುವ ಒಂದು ಸಾಹಿತ್ಯದ ರೂಪವೆಂದು ಕರೆಯಲಾಗುತ್ತದೆ. ಇದು ಅಂಕಣ ಎಂಬುದಕ್ಕೆ ಸಾಹಿತ್ಯಿಕ ನೆಲೆಯಲ್ಲಿ ಸಂಶೋಧನೆಯ ಆಧಾರದಿಂದ ಒದಗಿದ ಲಕ್ಷಣಾರ್ಥವಾಗಿದೆ.

"ಒಟ್ಟಿನಲ್ಲಿ 'ಅಂಕಣ' ಪದದಲ್ಲಿರುವ 'ಕಣ' ಎಂಬುದು 'ಚಿಕ್ಕ', 'ತುಣುಕು', 'ಸಣ್ಣದು', ದೊಡ್ಡದರ ಒಂದು ಭಾಗ ಹೀಗೆ ಬೇರೆ ಬೇರೆ ಅರ್ಥವನ್ನು ಹೊಂದಿದ್ದು 'ಅನ್' ಎಂಬ ಪೂರ್ಣ ಪ್ರತ್ಯಯ ಸೇರಿ 'ಅಂ+ಕಣ=ಅಂಕಣ' ಆಗಿದೆ. ಒಟ್ಟಿನಲ್ಲಿ ಹೇಳುವದಾದರೆ ಅಂಕಣವು ಒಂದು ಸ್ಥಳಕ್ಕೆ ಸಂಬಂಧಿಸಿದಂತೆ 'ವಿಸ್ತೀರ್ಣ' ಅಥವಾ 'ಅಂಗುಲ'ವನ್ನು ಹೇಳುವ ಮಾಪನವಾದರೆ; ಸಾಹಿತ್ಯಕ್ಕೆ ಸಂಬಂಧಿಸಿದಂತೆ ಒಂದು ವಿಚಾರದ ಅಂತರ್ಗತ ತಿಳುವಳಿಕೆಯನ್ನು ಸೂಚ್ಯವಾಗಿ ಹೊರಹಾಕುವ ಬರವಣಿಗೆಯ ರೂಪವಾಗಿದೆ. ಈ ಎರಡೂ ಅರ್ಥಗಳ ವಿವರಣೆಯಲ್ಲಿ ಚಿಕ್ಕದಾದ ಸ್ಥಳ ಅಥವಾ ಸಂಕ್ಷಿಪ್ತವಾದ ವಿಚಾರವಾದ ಒಂದೇ ಮೂಲಾರ್ಥವನ್ನು 'ಅಂಕಣ' ಪದವು ಒಳಗೊಂಡಿದೆ"5.

ಸಾಹಿತ್ಯ ಎನ್ನುವುದು ಸಾಮಾಜಿಕ ಜೀವನದ ಮೇಲೆ ಪರಿಣಾಮ ಬೀರಬಲ್ಲ ಮಾಧ್ಯಮ. ಅಲ್ಲದೇ ಸಾಹಿತ್ಯವು ವ್ಯಕ್ತಿಯ ಭಾವನೆಗಳನ್ನು ಅಭಿವ್ಯಕ್ತಿಸಲು ಇರುವ ಪ್ರಮುಖ ಬಹುಮುಖಿ ಸಾಧನವು ಹೌದು. ಕನ್ನಡ ಪ್ರಾಚೀನ ಸಾಹಿತ್ಯದ ಹಲವು ರೂಪಗಳಲ್ಲಿ ಮನುಷ್ಯನ ಜನಜೀವನವು ಚಿತ್ತರಗೊಂಡಿರುವುದನ್ನು ಗುರುತಿಸಬಹುದು. ಪ್ರಾಚೀನ ಸಾಹಿತ್ಯ ರೂಪಗಳಾದ ಚಂಪೂ, ಕಂದ, ವಚನ, ಷಟ್ಪದಿ, ರಗಳೆ, ಸಾಂಗತ್ಯ, ತ್ರಿಪದಿ, ಕೀರ್ತನೆ ಹೀಗೆ ಬೇರೆ ಬೇರೆ ಸಾಹಿತ್ಯ ರೂಪಗಳಲ್ಲಿ ಅಭಿವ್ಯಕ್ತಗೊಂಡಿದೆ. ಆ ಪರಂಪರೆಯು ಆಧುನಿಕ ಕನ್ನಡ ಸಾಹಿತ್ಯದಲ್ಲೂ ಮುಂದುವರೆದಿದೆ. ಆಧುನಿಕ ಕನ್ನಡ ಸಾಹಿತ್ಯ ರೂಪಗಳಾದ ಕಾವ್ಯ, ಕಥೆ, ಕಾದಂಬರಿ, ನಾಟಕ, ಪ್ರಬಂಧ, ಜೀವನ ಚರಿತ್ರೆ, ಆತ್ಮಚರಿತ್ರೆ, ಪ್ರವಾಸ ಸಾಹಿತ್ಯ, ವಿಮರ್ಶೆ, ಸಂಶೋಧನೆ, ಸಂಪಾದನೆ ಮೊದಲಾದ ಸೃಜನಾತ್ಮಕ ಬರವಣಿಗೆಗಳಲ್ಲಿ ಇತ್ತೀಚಿನ ದಶಕಗಳಲ್ಲಿ 'ಅಂಕಣ ಸಾಹಿತ್ಯ'ಕ್ಕೂ ಹೆಚ್ಚಿನ ಮನ್ನಣೆ ದೊರೆತಿದೆ.

ಹೀಗೆ ಕನ್ನಡ ನಾಡು-ನುಡಿ, ಸಂಸ್ಕೃತಿ ಕಟ್ಟುವಲ್ಲಿ ಅಂಕಣಕಾರರ ಮತ್ತು ಅಂಕಣಗಳ ಪಾತ್ರ ಮಹತ್ವವಾದದ್ದು. ಹಿಂದಿನ ಅಂಕಣಕಾರರಿಂದ ಹಿಡಿದು ಪ್ರಸ್ತುತ ಅಂಕಣಕಾರರವರೆಗೂ ಅವಲೋಕನ ಮಾಡಲಾಯಿತು. ಅಲ್ಲಿ ಅಂಕಣಕಾರರು ತಮ್ಮ ಅಂಕಣಗಳಲ್ಲಿ ಒಂದಲ್ಲ ಒಂದು ಅಂಕಣವನ್ನು ಕನ್ನಡ ನಾಡಿನ ಭಾಷೆ, ಸಂಸ್ಕೃತಿ, ಕಲೆ, ಶಿಲ್ಪಕಲೆ, ಸಾಹಿತ್ಯ ಹೀಗೆ ಹತ್ತು ಹಲವಾರು ವಿಷಯಗಳ ಬಗ್ಗೆ ಬರೆದಿರುವುದು ಕಂಡುಬರುತ್ತದೆ.

**ಅಡಿಟಿಪ್ಪಣಿಗಳು**

1 ಚಂಪಾ ಅವರ ಅಂಕಣ ಸಾಹಿತ್ಯ, ಚಿಕ್ಕಪ್ಪ ಮಾಳಗಿ– ಕ.ವಿ.ವಿ ಧಾರವಾಡ, ಪುಟ–17, 18

2 ಸಿಂಚನ, ಹಾ.ಮಾ. ನಾಯಕ, ಪುಟ–38

3 ಜನಪದ ಸಾಹಿತ್ಯ ಮತ್ತು ಅಂಕಣ ಸಾಹಿತ್ಯ, ಪ್ರಸಾರಾಂಗ, ಕ.ವಿ.ವಿ.ಧಾರವಾಡ, 2019, (ಲೇಖನ : ಅಂಕಣ ಸಾಹಿತ್ಯ, ಸದಾನಂದ ಕನವಳ್ಳಿ, ಪುಟ–37)

4 ಚಹಾದ ಜೋಡಿ..., ಸಿದ್ಧಲಿಂಗ ಪಟ್ಟಣಶೆಟ್ಟಿ, ಅನನ್ಯ ಪ್ರಕಾಶನ, ಧಾರವಾಡ, 1996, ಪುಟ–5

5 ಇಗೋ ಕನ್ನಡ ಸಾಮಾಜಿಕ ನಿಘಂಟು, ಜಿ.ವೆಂಕಟಸುಬ್ಬಯ್ಯ, ನವಕರ್ನಾಟಕ ಪ್ರಕಾಶನ, ಬೆಂಗಳೂರು, 1997, ಪುಟ–43

**ಗ್ರಂಥಋಣ**

1. ಅಂಕಣ ಸಾಹಿತ್ಯದ ಅಂದ ಹೆಚ್ಚಿಸಿದ ಎಂ.ಬಿ. ಕುಕ್ಯಾನ್, ಜಿ.ಎನ್. ಉಪಾಧ್ಯ, ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಮುಂಬಯಿ, 2012.
2. ಸಂಪ್ರತಿ, ಹಾ .ಮಾ. ನಾಯಕ, ಹೇಮಂತ ಸಾಹಿತ್ಯ ಪ್ರಕಾಶನ, ಚಿಕ್ಕಮಗಳೂರು, 2007.
3. ಕನ್ನಡ ಸಾಹಿತ್ಯ ಪತ್ರಿಕೆಗಳು ಇತಿಹಾಸ–ವರ್ತಮಾನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 1993.
4. ಚಹಾದ ಜೋಡಿ, ಸಿದ್ಧಲಿಂಗ ಪಟ್ಟಣಶೆಟ್ಟಿ, ಅನನ್ಯ ಪ್ರಕಾಶನ, ಧಾರವಾಡ, 1996.
5. ಅಂಕಣತೋಟ, ವಾಗೀಶ ಬ. ಹೂಗಾರ (ಸಂ.), ಮಲೆನಾಡು ಪ್ರಕಾಶನ, ಚಿಕ್ಕಮಗಳೂರು, 2020.
6. ಸಾಹಿತ್ಯ ಪ್ರಕಾರಗಳು, ಪಿ.ವಿ.ಶಾಸ್ತ್ರಿ, ಪ್ರತಿಭಾ ಗ್ರಂಥಮಾಲೆ, ಧಾರವಾಡ, 2011.7) ಪ್ರಬಂಧ ಪ್ರಪಂಚ, ಎಚ್.ವ್ಹಿ .ನಾಗೇಶ , ಡಾ.ರಾ.ಯ. ಧಾರವಾಡಕರ ಸನ್ಮಾನ ಸಮಿತಿ, ಧಾರವಾಡ,1990.
7. ಕನ್ನಡ ಸಾಹಿತ್ಯ ವಿಮರ್ಶೆಯ ತಾತ್ವಿಕ ವಿವೇಚನೆ, ಡಾ.ರಂ.ಶ್ರೀ.ಮುಗಳಿ,1957.
8. ಕನ್ನಡದಲ್ಲಿ ಅಂಕಣ ಸಾಹಿತ್ಯ, ಡಾ. ದೊಡ್ಡೇಗೌಡ. ಬಿ . ಸಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರ, 2021.
9. ಪ್ರಬಂಧ ಪ್ರಪಂಚ, ಎಚ್. ವಿ. ನಾಗೇಶ್, ಡಾ. ರಾ.ಯ. ಧಾರವಾಡಕರ ಸನ್ಮಾನ ಸಮಿತಿ, ಧಾರವಾಡ, 1990, ಪುಟ–182–184